**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.Lok.14/2014**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ. ಆರ್. ಪಂಪಾಪತಿ |
| ತಂದೆಯ ಹೆಸರು | : | ಕೆ. ರಾಮಣ್ಣ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ Assistant Sub-Inspector |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 13

ದಿ: 10-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1. ನಾನು ದಾವಣಗೆರೆಯ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ನವೆಂಬರ್ 2010 ರಿಂದ 2015 ರವರೆಗೆ ಹೆಚ್.ಸಿ. ಆಗಿ ಕೆಲಸ ಮಾಡಿದ್ದೇನೆ. ವಹಿಸುವಿಕೆ ಪಂಚನಾಮೆಯಲ್ಲಿ ನಾನು ಒಂದು ಗಾಜಿನ ಬಟ್ಟಲಿನಲ್ಲಿ ಶುದ್ಧ ನೀರನ್ನು ಹಾಕಿ ಅದಕ್ಕೆ ಸೋಡಿಯಂ ಕಾರ್ಬೊನೇಟ್ ಪುಡಿಯನ್ನು ಹಾಕಿ ಧ್ರಾವಣವನ್ನು ತಯಾರಿಸಿರುತ್ತೇನೆ. ವಹಿಸುವಿಕೆ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಆ ಸಹಿಯನ್ನು ಈಗ ನೋಡಿ ಗುರುತಿಸುತ್ತೇನೆ. ನಿಪಿ-1 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಅಂತ ಗುರುತಿಸಲಾಯಿತು.

2. ತಯಾರಿಸಿದ ದ್ರಾವಣನ್ನು ನಾನು ಎರಡು ಖಾಲಿ ಬಾಟಲ್ ಗಳಲ್ಲಿ ಹಾಕಿ ಮುಚ್ಚಳವನ್ನು ಮುಚ್ಚಿ Article No.2, Article No.2A ಅಂತ ಗುರುತು ನೀಡಿರುತ್ತೇನೆ. ಪಂಚ-02 ಅಮಿತ್ ಕುಮಾರರವರು ಫಿನಾಪ್ತಿಲಿನ್ ಪೌಡರ್ ನ್ನು ಸವರಿದ ನೋಟುಗಳನ್ನು ಕೈಗಳಿಂದ ಎಣಿಸಿ, ನಂತರ ಉಳಿದ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಕೈ ತೊಳೆದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಯಿತು. ಬದಲಾದ ದ್ರಾವಣವನ್ನು ಎರಡು ಬಾಟಲ್ ಗಳಲ್ಲಿ ಹಾಕಿ ಮುಚ್ಚಳವನ್ನು ಮುಚ್ಚಿ Article No.3, Article No.3A ಅಂತ ಗುರುತು ನೀಡಿರುತ್ತೇನೆ. ಅರಗಿನಿಂದ AM ಎಂಬ ಇಂಗ್ಲೀಷ ಅಕ್ಷರದಲ್ಲಿ ಸೀಲ್ ಮಾಡಲಾಯಿತು. ನಂತರ ಪಿ.ಐ., ದೂರುದಾರರು ಸಹಿ ಮಾಡಿದ ಚೀಟಿಗಳನ್ನು ಬಾಟಲಗಳಿಗೆ ಅಂಟಿಸಲಾಯಿತು ಮತ್ತು ಪಿ.ಐ. ರವರು ಅವುಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಪಿ.ಐ. ರವರು ಮಧ್ಯಾಹ್ನ 12.45 ರಿಂದ 2.30 ರವರೆಗೆ ವಹಿಸುವಿಕೆ ಪಂಚನಾಮೆಯನ್ನು ಮಾಡಲಾಯಿತು.

3. ಟ್ರ್ಯಾಪ್ ಸಮಯದಲ್ಲಿ ಪಿ.ಐ. ರವರಿಗೆ ಸಹಕರಿಸಿರುತ್ತೇನೆ. ನಂತರ ರಾತ್ರಿ 8.40 ರಿಂದ ಮಧ್ಯರಾತ್ರಿ 1.00 ಗಂಟೆಯವರೆಗೆ ಪಿ.ಐ. ರವರ ಉಕ್ತ ಲೇಖನದಂತೆ ಲೋಕಾಯುಕ್ತ ಲ್ಯಾಪಟಾಪ್ ನಲ್ಲಿ ಪಂಚರ ಸಮಕ್ಷಮ ಗಣಕೀಕರಿಸಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಟ್ರ್ಯಾಪ್ ಪಂಚನಾಮೆಯನ್ನು ಈಗಾಗಲೇ ನಿಪಿ-8A ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8A(1) ಅಂತ ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಎಸ್.ಕೆ.ಕೆ., ವಕೀಲರಿಂದ ಆರೋಪಿತರ ಪರವಾಗಿ</u>**:

4. Chemistry ವಿಷಯದ ಬಗ್ಗೆ ನಾನು ವಿದ್ಯಾರ್ಹತೆ ಮಾಡಿರುವುದಿಲ್ಲ. ಗುಲಾಬಿ ಬಣ್ಣಕ್ಕೆ ಯಾವ PH value ನಲ್ಲಿ ಬದಲಾಗುತ್ತದೆ ಅಂತ ನನಗೆ ಗೊತ್ತಾಗುವುದಿಲ್ಲ. ಫಿನಾಪ್ತಿಲಿನ್ ಪೌಡರ್ ಬಣ್ಣ ರಹಿತವಾಗಿರುತ್ತದೆ. ಫಿನಾಪ್ತಿಲಿನ್ ಪೌಡರ್ ಪೇಪರ್ ಮೇಲೆ, ನೋಟಿನ ಮೇಲೆ ಹಾಕಿದರೆ ಎಲ್ಲಿ ಹಾಕಿದ್ದಾರೆ ಅಂತ ಗೊತ್ತಾಗುವುದಿಲ್ಲ ಹಾಗೂ ಕಾಣುವುದಿಲ್ಲ ಅಂದರೆ ನಿಜ. ದೂರುದಾರರು, ಪಂಚ-1 ಒಂದೇ ಬೈಕ್

ನಲ್ಲಿ ಆರೋಪಿಯ ಕಛೇರಿಗೆ ಹೋದರು. ಟ್ರ್ಯಾಪ್ ಮಾಡುವ ಕಾಲಕ್ಕೆ ಪಂಚ-1 ರವರು ಆರೋಪಿಗೆ ನೋಟುಗಳನ್ನು ಕೊಡುವ ಪೂರ್ವದಲ್ಲಿ ಅವರ ಕೈಯನ್ನು ತೊಳೆಸಿರಲಿಲ್ಲ ಅಂದರೆ ನಿಜ. ಟ್ರ್ಯಾಪ್ ಪಂಚನಾಮೆ ಮಾಡುವ ಅವಧಿಯಲ್ಲಿ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೂ ಅಲ್ಲಿ ಇರಲಿಲ್ಲ. ತನಿಖಾಧಿಕಾರಿಗಳ ಒತ್ತಡಕ್ಕೆ ಒಳಗಾಗಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.